## ರೈತ ದಿನಾಚರಣೆ: ಕೃಷಿ ಬೆಲೆ ಆಯೋಗದಿಂದ ಕಾರ್ಯಾಗಾರ

# ಕರಾವಳಿ ರೈತರು ಪ್ರಯೋಗಶೀಲರು: ಕಟೀಲ್

ಪ್ರಜಾವಾಣಿ ವಾರ್ತೆ

ಮಂಗಳೂರು: ರೈತರು ಆತ್ಮಹತ್ಯೆ ಮಾಡಿಕೊಳ್ಳದ ದೇಶದ ಏಕೈಕ ಜಿಲ್ಲೆ ದಕ್ಷಿಣ ಕನ್ನಡ. ಕರಾವಳಿಯ ರೈತರು ಪ್ರಯೋಗಶೀಲರು. ಇಲ್ಲಿನ ರೈತರು ಲಾಭ ತಂದುಕೊಡುವ ಕೃಷಿ ಯಾವುದು ಎಂಬುದರ ಬಗ್ಗೆ ಸದಾ ಯೋಚಿಸುತ್ತಾರೆ. ಹೊಸ ಚಿಂತನೆ ಮತ್ತು ಅವಿಷ್ಕಾರ ಪ್ರವೃತ್ತಿಯೇ ಇಲ್ಲಿನ ರೈತರ ಯಶಸ್ಸಿನ ಗುಟ್ಟು ಎಂದು ಸಂಸದ ನಳಿನ್ ಕುಮಾರ್ ಕಟೀಲ್ ಅಭಿಪ್ರಾಯಪಟ್ಟರು.

ಮಂಗಳೂರಿನ ಎಕ್ಕೂರಿನಲ್ಲಿರುವ ಮೀನುಗಾರಿಕಾ ಕಾಲೇಜಿನಲ್ಲಿ ಕರ್ನಾಟಕ ಕೃಷಿ ಬೆಲೆ ಆಯೋಗವು ಶುಕ್ರವಾರ ಆಯೋಜಿಸಿದ್ದ 'ರೈತರ ಆದಾಯವೃದ್ಧಿ ಮತ್ತು ಕಲ್ಯಾಣ' ಎಂಬ ವಿಷಯ ಕುರಿತ ಒಂದು ದಿನದ ಕಾರ್ಯಾಗಾರದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಭತ್ತ ಬೆಳೆಯುವುದರಿಂದ ಲಾಭ ಸಿಗುವುದಿಲ್ಲ ಎಂಬ ಸತ್ಯ ಗೊತ್ತಾದ ತಕ್ಷಣ ಇಲ್ಲಿನ ರೈತರು ಅಡಿಕೆಯತ್ತ ಹೊರಳಿದರು. ಅಡಿಕೆಯೂ ಕೈಕೊಟ್ಟ ನಂತರ ತೋಟಗಾರಿಕೆಯತ್ತ ಒಲವು ಬೆಳೆಸಿಕೊಂಡರು. ಪುತ್ತೂರು, ಸುಳ್ಯ, ಬೆಳ್ತಂಗಡಿ ಭಾಗದ ರೈತರು ಈಗ ಕೃಷಿಗಿಂತಲೂ ತೋಟಗಾರಿಕೆಯನ್ನೇ ಹೆಚ್ಚು ನಂಬಿಕೊಂಡಿದ್ದಾರೆ. ಮಂಗಳೂರು ತಾಲ್ಲೂಕಿನಲ್ಲಿ ಅಲ್ಪಸ್ವಲ್ಪ ಸಾಂಪ್ರದಾಯಿಕ ಕೃಷಿ ಉಳಿದಿದೆ. ಆದರೆ, ಇವರೆಲ್ಲರೂ ಈಗ ಲಾಭ ನಷ್ಟದ ಲೆಕ್ಕಾಚಾರದಲ್ಲಿ ಮುಳುಗಿದ್ದಾರೆ. ಕೃಷಿ ಮಾಡುವುದಕ್ಕಿಂತಲೂ ಕೃಷಿ ಭೂಮಿ ಮಾರಾಟ ಮಾಡುವತ್ತ ಹೆಚ್ಚು ಆಸಕ್ತರಾಗಿದ್ದಾರೆ. ಪರಿಣಾಮವಾಗಿ ಮಂಗಳೂರು ತಾಲ್ಲೂಕಿನ ಕೃಷಿ ಭೂಮಿಯಲ್ಲಿ ಬೃಹತ್ ಉದ್ದಿಮೆಗಳು ಎದ್ದು ನಿಂತಿವೆ ಎಂದು ತಿಳಿಸಿದರು.



ಮಂಗಳೂರಿನ ಎಕ್ಕೂರಿನಲ್ಲಿರುವ ಮೀನುಗಾರಿಕಾ ಕಾಲೇಜಿನಲ್ಲಿ ಕರ್ನಾಟಕ ಕೃಷಿ ಬೆಲೆ ಆಯೋಗವು ಶುಕ್ರವಾರ ಆಯೋಜಿಸಿದ್ದ 'ರೈತರ ಆದಾಯವೃದ್ಧಿ ಮತ್ತು ಕಲ್ಯಾಣ' ಕಾರ್ಯಾಗಾರವನ್ನು ಸಚಿವ ರಮಾನಾಥ ರೈ ಉದ್ಘಾಟಿಸಿದರು.

ರೈತರ ಉತ್ಪನ್ನಗಳಿಗೆ ಮಾರುಕಟ್ಟೆ ಬೆಲೆ ಇತ್ಯಾದಿ ವಿಚಾರಗಳ ಬಗ್ಗೆ ಸರ್ಕಾರಕ್ಕೆ ಅಗತ್ಯವಿರುವ ವೈಜ್ಞಾನಿಕ ವರದಿ, ಅಧ್ಯಯನ, ಸಂಶೋಧನೆ, ಸಲಹೆ, ಸೂಚನೆ ಕೊಡಲು ರಾಜ್ಯ ಸರ್ಕಾರ ಕೃಷಿ ಬೆಲೆ ಆಯೋಗ ರಚನೆ ಮಾಡಿದೆ. ಬಹುಶಃ ದೇಶದಲ್ಲೇ ಮೊದಲಬಾರಿಗೆ ಇಂತದ್ದೊಂದು ಪ್ರಯೋಗ ನಡೆದಿದೆ ಎನ್ನಬಹುದು. ರೈತರು ಬೆಳೆದ ಉತ್ಪನ್ನಗಳಿಗೆ ಮಾರುಕಟ್ಟೆ ಬೆಲೆ ಸಿಗುವಂತಾಗಬೇಕು. ಆದರೆ, ಮಾರುಕಟ್ಟೆ ಬೆಲೆ ಒದಗಿಸಿ ಕೊಡುವುದು ಸವಾಲಿನ ಕೆಲಸವೇ ಸರಿ. ಕೃಷಿ ಉತ್ಪನ್ನಗಳಿಗೆ ಬೆಲೆ ನಿಗದಿ ಮಾಡಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಒಟ್ಟಿಗೆ ಕೆಲಸ ಮಾಡಬೇಕು. ಇದಕ್ಕೆ ಕೃಷಿ ಬೆಲೆ ಆಯೋಗ ಕೊಂಡಿಯಂತೆ ಕೆಲಸ ಮಾಡುತ್ತದೆ. ಇದರ ಜತೆಗೆ ರೈತರಿಗೆ ಸಂಬಂಧಪಟ್ಟಂತಹ ಬೆಳೆ ವಿಮೆ, ಆಹಾರ ಭದ್ರತೆ, ಹವಾಮಾನ ವೈಪರೀತ್ಯ, ಆದಾಯ ಮತ್ತು ಕಲ್ಯಾಣ ಈ ಎಲ್ಲ ವಿಚಾರಗಳೂ ಆಯೋಗದ ಪರಧಿಗೆ ಬರುತ್ತವೆ ಎಂದು ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ ತಿಳಿಸಿದರು.

ನಮ್ಮ ಜಿಲ್ಲೆಯ ಕೃಷಿ ಚಟುವಟಿಕೆಗಳಲ್ಲಿ ಸಾಕಷ್ಟು ಬದಲಾವಣೆಗಳಾಗಿವೆ. ಇಲ್ಲಿನ ರೈತರು ಆಹಾರ ಭದ್ರತೆಗಾಗಿ ಕೃಷಿ ಮಾಡುವುದಕ್ಕಿಂತಲೂ ಆರ್ಥಿಕ ಲಾಭ ತರುವ ಕೃಷಿಯತ್ತಲೇ ಹೆಚ್ಚಿನ ಒಲವು ಹೊಂದಿದ್ದಾರೆ. ಅದು ಪ್ರತಿಯೊಬ್ಬ ರೈತನಿಗೂ ಇರುವ ಸಹಜ ಗುಣವೇ ಸರಿ. ತೋಟಗಾರಿಕಾ ಕೃಷಿಯತ್ತ ಹೊರಳಿದ ಅನೇಕ ರೈತರು ಕೂಡ ಈಗ ಕೈ ಸುಟ್ಟುಕೊಂಡಿದ್ದಾರೆ. ಅದಕ್ಕೆ ಪರಿಹಾರೋಪಾಯ ದೊರಕಿಸಿಕೊಡುವ ನಿಟ್ಟಿನಲ್ಲಿ ಆಯೋಗ ಹೆಚ್ಚು ಗಮನಹರಿಸಬೇಕು. ರೈತರೂ ಕೂಡ ಬೆಳೆ ಬೆಳೆಯುವುದರ ಜತೆಗೆ ಮೌಲ್ಯವರ್ಧಿತ ಉತ್ಪನ್ನಗಳ ತಯಾರಿಕೆಯತ್ತಲೂ ಗಮನ ಹರಿಸಬೇಕು ಎಂದು ಸಚಿವ ರಮಾನಾಥ ರೈ ತಿಳಿಸಿದರು.

ಜಿಲ್ಲಾ ಪಂಚಾಯಿತಿ ಅಧ್ಯಕ್ಷೆ ಮೀನಾಕ್ಷಿ ಶಾಂತಿಗೋಡು, ಉಪಾಧ್ಯಕ್ಷೆ ಕಸ್ತೂರಿ ಪಂಜ, ಸಚಿವ ಯು.ಟಿ. ಖಾದರ್, ಕ್ಯಾ. ಗಣೇಶ್ ಕಾರ್ಣಿಕ್, ಹನುಮನಗೌಡ ಬೆಳಗುರ್ಕಿ, ಡಾ. ಪೂರ್ಣಿಮಾ ಬಾಳಿಗಾ, ಡಾ. ಕೆಂಪೇಗೌಡ, ಜಿಲ್ಲಾ ಪಂಚಾಯಿತಿ ಸಿಇಒ ಡಾ. ಎಂ.ಆರ್.ರವಿ ಹಾಗೂ ಮತ್ತಿತರರು ಉಪಸ್ಥಿತರಿದ್ದರು.

# ದ.ಕ. ಸಹಿತ 8 ಜಿಲ್ಲೆಗಳಲ್ಲಿ ಪ್ರಾಯೋಗಿಕ ಗ್ರಾಮ ಸರ್ವೆ: ಡಾ| ಪ್ರಕಾಶ್ ಕಮ್ಮರಡಿ



'ರೈತ ಆದಾಯ ವೃದ್ಧಿ ಮತ್ತು ಕಲ್ಯಾಣ ಕಾರ್ಯಾಗಾರ'ವನ್ನು ಅರಣ್ಯ ಸಚಿವ ಬಿ. ರಮಾನಾಥ ರೈ ಉದ್ಘಾಟಿಸಿದರು.

ಮಂಗಳೂರು, ಡಿ. 23: ರಾಜ್ಯದ ರೈತರ ಆದಾಯ ಹಾಗೂ ಕಲ್ಯಾಣವೃದ್ಧಿಗೆ ಸರಕಾರ ಪೂರಕ ಕಾರ್ಯಕ್ರಮ ರೂಪಿಸಲು ಅನುಕೂಲ ಕಲ್ಪಿಸುವ ನೆಲೆಯಲ್ಲಿ ದ.ಕ. ಸಹಿತ ಎಂಟು ಜಿಲ್ಲೆಗಳ ಪ್ರಾತಿನಿಧಿಕ ಗ್ರಾಮಗಳಲ್ಲಿ ಸಮಗ್ರ ಪ್ರಾಯೋಗಿಕ ಕಾರ್ಯಯೋಜನೆಯನ್ನು ಕರ್ನಾಟಕ ಕೃಷಿ ಬೆಲೆ ಆಯೋಗ ಅನುಷ್ಠಾನಿಸಲಿದೆ ಎಂದು ಆಯೋಗದ ಅಧ್ಯಕ್ಷ ಡಾ| ಟಿ.ಎನ್. ಪ್ರಕಾಶ್ ಕಮ್ಮರಡಿ ಹೇಳಿದರು.

ಕರ್ನಾಟಕ ಕೃಷಿ ಬೆಲೆ ಆಯೋಗ, ಕೃಷಿ ಇಲಾಖೆ, ಜಿ.ಪಂ., ಐಸಿಎಆರ್ ಕೃಷಿ ವಿಜ್ಞಾನ ಕೇಂದ್ರ ಮಂಗಳೂರು ಸಂಯುಕ್ತ ಆಶ್ರಯದಲ್ಲಿ ರಾಷ್ಟ್ರೀಯ ರೈತ ದಿನಾಚರಣೆ ಅಂಗವಾಗಿ ನಗರದ ಮೀನುಗಾರಿಕಾ ಕಾಲೇಜಿನಲ್ಲಿ ಶುಕ್ರವಾರ ಜರುಗಿದ 'ರೈತ ಆದಾಯ ವೃದ್ಧಿ ಮತ್ತು ಕಲ್ಯಾಣ ಕಾರ್ಯಾಗಾರ'ದಲ್ಲಿ ಅವರು ಮಾತನಾಡಿದರು.

ದಕ್ಷಿಣ ಕನ್ನಡ ಜಿಲ್ಲೆಯ ಮೂಡಬಿದಿರೆಯ ಧರೆಗುಡ್ಡೆ ಗ್ರಾಮವನ್ನು ಪ್ರಾತಿನಿಧಿಕ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ. ಇದರ ಜತೆಗೆ ತುಮಕೂರು, ಹನುಮನಮಟ್ಟಿ ರಾಯಚೂರು, ಕಲಬುರಗಿ, ಕೋಲಾರ, ಹಿರಿಯೂರು ಮತ್ತು ಅರಭಾವಿ ಯೋಜನೆ ಅನುಷ್ಠಾನಗೊಳ್ಳಲಿರುವ ಇತರ ಕೇಂದ್ರಗಳಾಗಿವೆ ಎಂದರು.

**ಪೂರಕ ಕಾರ್ಯಕ್ರಮ: ಸಚಿವ ರಮಾನಾಥ ರೈ**

ಹಿಂದೆ ಒಂದು ಗ್ರಾಮದಲ್ಲಿ ಕೇವಲ 4 ಅಥವಾ 5 ಜನರು ಪಟ್ಟಾದಾರರು ಇರುತ್ತಿದ್ದರು. ಆದರೆ ಇಂದು ಪರಿಸ್ಥಿತಿ ಬದಲಾಗಿದ್ದು ಗ್ರಾಮದಲ್ಲಿ ಸುಮಾರು ಮೂರು ಸಾವಿರದಷ್ಟು ಸಣ್ಣ ಹಿಡುವಳಿದಾರರು ಇದ್ದಾರೆ. ಆದ್ದರಿಂದ ಜಿಲ್ಲೆಯ ಮಟ್ಟಿಗೆ ಸಣ್ಣ ಹಿಡುವಳಿದಾರರಿಗೆ ಪೂರಕ ಕಾರ್ಯಕ್ರಮ ಆವಶ್ಯ ಎಂದು ಸಚಿವ ಬಿ. ರಮಾನಾಥ ರೈ ಹೇಳಿದರು.

**ಪ್ರಯೋಗಶೀಲ ರೈತರು: ಸಂಸದ ನಳಿನ್**

ಸಂಸದ ನಳಿನ್ ಕುಮಾರ್ ಕಟೀಲು ಮಾತನಾಡಿ, ರಾಜ್ಯದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಸಂದರ್ಭ ಎದುರಾದರೂ ದಕ್ಷಿಣ ಕನ್ನಡದಲ್ಲಿ ಇಂತಹ ಯಾವುದೇ ದುರ್ಘಟನೆ ಸಂಭವಿಸಿಲ್ಲ, ಇದಕ್ಕೆ ಇಲ್ಲಿನ ರೈತರು ಬೆಳೆಸಿಕೊಂಡಿರುವ ಪ್ರಯೋಗಶೀಲ ಗುಣ ಕಾರಣ ಎಂದರು.

ವಿಧಾನಪರಿಷತ್‌ನ ವಿರೋಧ ಪಕ್ಷದ ಮುಖ್ಯ ಸಚೇತಕ ಕ್ಯಾ| ಗಣೇಶ್ ಕಾರ್ಣಿಕ್ ಅಧ್ಯಕ್ಷತೆ ವಹಿಸಿದ್ದರು. ಆಹಾರ ಖಾತೆ ಸಚಿವ ಯು.ಟಿ. ಖಾದರ್, ಜಿ.ಪಂ. ಅಧ್ಯಕ್ಷೆ ಮೀನಾಕ್ಷಿ ಶಾಂತಿಗೋಡು, ಸಿಇಒ ಡಾ| ಎಂ.ಆರ್. ರವಿ, ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿ.ವಿ. ಕುಲಪತಿ ಡಾ| ಆರ್.ವಿ. ಪ್ರಸಾದ್, ಬೀದರ್ ಕ.ಪ.ಪ.ಮೀ.ವಿ. ಕುಲಸಚಿವ ಡಾ| ಎಚ್. ಶಿವಾನಂದಮೂರ್ತಿ, ಕೆಎಂಸಿ ಡೀನ್ ಡಾ| ಪೂರ್ಣಿಮಾ ಬಾಳಿಗಾ, ಮೀನುಗಾರಿಕೆ ವಿ.ವಿ. ಡೀನ್ ಡಾ| ಎಂ.ಎನ್. ವೇಣುಗೋಪಾಲ್, ಕೃಷಿಕ ಸಮಾಜದ ಅಧ್ಯಕ್ಷ ಸಂಪತ್ ಸಾಮ್ರಾಜ್ಯ ಮುಖ್ಯ ಅತಿಥಿಗಳಾಗಿದ್ದರು.

ಕೆವಿಕೆ ಮುಖ್ಯಸ್ಥ ಡಾ| ಶಿವಕುಮಾರ್ ಮಗದ ಸ್ವಾಗತಿಸಿದರು. ಕೃಷಿ ಇಲಾಖೆಯ ಜಂಟಿ ಕೃಷಿ ನಿರ್ದೇಶಕ ಡಾ| ಕೆಂಪೇಗೌಡ ಎಚ್. ಉಪಸ್ಥಿತರಿದ್ದರು.

# ರೈತರ ಆದಾಯ ವೃದ್ಧಿಗೆ ಅಧ್ಯಯನ

## ದ.ಕ. ಸಹಿತ 8 ಜಿಲ್ಲೆಗಳ ಪ್ರಾತಿನಿಧಿಕ ಗ್ರಾಮಗಳು ಆಯ್ಕೆ | ಕೃಷಿ ಬೆಲೆ ಆಯೋಗದ ಕಾರ್ಯಯೋಜನೆ

**ವಿಜಯವಾಣಿ ಸುದ್ದಿಜಾಲ** ಮಂಗಳೂರು

ರಾಜ್ಯದ ರೈತರ ಆದಾಯ ಹಾಗೂ ಕಲ್ಯಾಣ ವೃದ್ಧಿಗೆ ಪೂರಕ ಕಾರ್ಯಕ್ರಮ ರೂಪಿಸಲು ಅನುಕೂಲವಾಗುವಂತೆ ಕರ್ನಾಟಕದ ಕೃಷಿ ಬೆಲೆ ಆಯೋಗ ವತಿಯಿಂದ ದಕ್ಷಿಣ ಕನ್ನಡ ಸಹಿತ ಎಂಟು ಜಿಲ್ಲೆಗಳ ಪ್ರಾತಿನಿಧಿಕ ಗ್ರಾಮಗಳಲ್ಲಿ ಸಮಗ್ರ ಪ್ರಾಯೋಗಿಕ ಕಾರ್ಯಯೋಜನೆ ಅನುಷ್ಠಾನಗೊಳ್ಳಲಿದೆ ಎಂದು ಆಯೋಗದ ಅಧ್ಯಕ್ಷ ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ ಹೇಳಿದರು.

ಕರ್ನಾಟಕ ಕೃಷಿ ಬೆಲೆ ಆಯೋಗ, ಕೃಷಿ ಇಲಾಖೆ, ಜಿಲ್ಲಾ ಪಂಚಾಯಿತಿ, ಐಸಿಎಆರ್ ಕೃಷಿ ವಿಜ್ಞಾನ ಕೇಂದ್ರ ಮಂಗಳೂರು ಸಂಯುಕ್ತ ಆಶ್ರಯದಲ್ಲಿ ರಾಷ್ಟ್ರೀಯ ರೈತ ದಿನಾಚರಣೆ ಅಂಗವಾಗಿ ನಗರದ ಮೀನುಗಾರಿಕಾ ಕಾಲೇಜಿನಲ್ಲಿ ಶುಕ್ರವಾರ ಜರುಗಿದ ರೈತ ಆದಾಯ ವೃದ್ಧಿ ಮತ್ತು ಕಲ್ಯಾಣ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ತುಮಕೂರು, ಹನುಮನ ಮಟ್ಟಿ, ರಾಯಚೂರು, ಕಲಬುರಗಿ, ಕೋಲಾರ, ಹಿರಿಯೂರು ಮತ್ತು ಅರಭಾವಿ ಯೋಜನೆ ಅನುಷ್ಠಾನಗೊಳ್ಳಲಿರುವ ಇತರ ಕೇಂದ್ರಗಳು. ದಕ್ಷಿಣ ಕನ್ನಡ ಜಿಲ್ಲೆಯ ಮೂಡುಬಿದಿರೆಯ ಧರೆಗುಡ್ಡೆ ಗ್ರಾಮವನ್ನು ಪ್ರಾತಿನಿಧಿಕ ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ ಎಂದವರು ವಿವರಿಸಿದರು.

**ದ.ಕ.ಪ್ರಯೋಗಶೀಲ:** ಇಡೀ ರಾಜ್ಯದಲ್ಲಿ ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಸಂದರ್ಭ ಕೂಡ ದಕ್ಷಿಣ ಕನ್ನಡದಲ್ಲಿ ಯಾವುದೇ ಇಂತಹ ದುರ್ಘಟನೆ ಸಂಭವಿಸಿಲ್ಲ. ಇದಕ್ಕೆ ಇಲ್ಲಿನ ರೈತರು ಬೆಳೆಸಿಕೊಂಡಿರುವ ಪ್ರಯೋಗಶೀಲ ಗುಣ ಕಾರಣ ಎಂದು ಮುಖ್ಯ ಅತಿಥಿ ಸಂಸದ ನಳಿನ್ ಕುಮಾರ್ ಕಟೀಲು ಅಭಿಪ್ರಾಯಪಟ್ಟರು.

ಭತ್ತದ ಬೇಸಾಯ ಆರ್ಥಿಕವಾಗಿ ತೀರಾ ನಷ್ಟ ತಂದಾಗ ಜಿಲ್ಲೆಯ ರೈತರು ಅಡಕೆ ಬೆಳೆಯಲು ಆರಂಭಿಸಿದರು. ಬಳಿಕ ವೆನಿಲ್ಲಾ ನೆಟ್ಟರು, ವಿವಿಧ ತೋಟಗಾರಿಕಾ ಬೆಳೆಗಳ ಪ್ರಯೋಗ ನಡೆಸಿದರು ಎಂದರು.




ಮಂಗಳೂರು ಮೀನುಗಾರಿಕಾ ಕಾಲೇಜಿನಲ್ಲಿ ಶುಕ್ರವಾರ ಜರುಗಿದ ರೈತ ಆದಾಯವೃದ್ಧಿ ಮತ್ತು ಕಲ್ಯಾಣ-ಕಾರ್ಯಾಗಾರವನ್ನು ಸಚಿವ ಬಿ. ರಮಾನಾಥ ರೈ ಉದ್ಘಾಟಿಸಿದರು. ಸಚಿವ ಯು.ಟಿ. ಖಾದರ್, ಸಂಸದ ನಳಿನ್ ಕುಮಾರ್ ಕಟೀಲು, ವಿಧಾನ ಪರಿಷತ್ ವಿಪಕ್ಷ ಮುಖ್ಯ ಸಚೇತಕ ಕ್ಯಾ. ಗಣೇಶ್ ಕಾರ್ಣಿಕ್, ಕರ್ನಾಟಕದ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ. ಟಿ.ಎನ್. ಪ್ರಕಾಶ್ ಕಮ್ಮರಡಿ ಉಪಸ್ಥಿತರಿದ್ದರು.

- ದಕ್ಷಿಣ ಕನ್ನಡ ರೈತ ವರ್ಗ ಪ್ರಯೋಗಶೀಲರು ಎಂದ ಸಂಸದ ನಳೀನ್ ಕುಮಾರ್ ಕಟೀಲ್
- ಜಿಲ್ಲೆಯ ಸಣ್ಣ ಹಿಡುವಳಿದಾರರಿಗೆ ಪೂರಕ ಕಾರ್ಯಕ್ರಮ ಅವಶ್ಯ ಎಂದು ಸಚಿವ ರಮಾನಾಥ ರೈ ಅಭಿಪ್ರಾಯ

**ಸಣ್ಣ ಹಿಡುವಳಿದಾರರು:** ಜಿಲ್ಲಾ ಉಸ್ತುವಾರಿ ಸಚಿವ ಬಿ.ರಮಾನಾಥ ರೈ ಮಾತನಾಡಿ, ಹಿಂದೆ ಒಂದು ಗ್ರಾಮದಲ್ಲಿ ಕೇವಲ 4 ಅಥವಾ 5 ಜನರು ಪಟ್ಟಾದಾರರು ಇರುತ್ತಿದ್ದರು. ಆದರೆ ಇಂದು ಪರಿಸ್ಥಿತಿ ಬದಲಾಗಿದ್ದು, ಗ್ರಾಮದಲ್ಲಿ ಸುಮಾರು ಮೂರು ಸಾವಿರದಷ್ಟು ಸಣ್ಣ ಹಿಡುವಳಿದಾರರು ಇದ್ದಾರೆ. ಆದ್ದರಿಂದ ಜಿಲ್ಲೆಯ ಮಟ್ಟಿಗೆ ಸಣ್ಣ ಹಿಡುವಳಿದಾರರಿಗೆ ಪೂರಕ ಕಾರ್ಯಕ್ರಮ ಅವಶ್ಯ ಎಂದು ಅಭಿಪ್ರಾಯಪಟ್ಟರು.

ಆಹಾರ ಸಚಿವ ಯು.ಟಿ. ಖಾದರ್, ಜಿಪಂ ಅಧ್ಯಕ್ಷೆ ಮೀನಾಕ್ಷಿ ಶಾಂತಿಗೋಡು, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಡಾ. ಎಂ.ಆರ್. ರವಿ, ಕರ್ನಾಟಕ ಪಶುವೈದ್ಯಕೀಯ, ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ.ಆರ್.ವಿ. ಪ್ರಸಾದ್, ಬೀದರ್ ಕ.ಪ.ಪ. ಮೀ.ವಿ. ಕುಲಸಚಿವ ಡಾ.ಎಚ್.ಶಿವಾನಂದ ಮೂರ್ತಿ, ಕೆಎಂಸಿ ಡೀನ್ ಡಾ. ಪೂರ್ಣಿಮಾ ಬಾಳಿಗಾ, ಮೀನುಗಾರಿಕೆ ಮಹಾ ವಿದ್ಯಾಲಯದ ಡೀನ್ ಡಾ.ಎಂ.ಎನ್. ವೇಣುಗೋಪಾಲ್, ಕೃಷಿಕ ಸಮಾಜದ ಅಧ್ಯಕ್ಷ ಸಂಪತ್ ಸಾಮ್ರಾಜ್ಯ ಮುಖ್ಯ ಅತಿಥಿಗಳಾಗಿದ್ದರು.

ವಿಧಾನ ಪರಿಷತ್ ವಿಪಕ್ಷದ ಮುಖ್ಯ ಸಚೇತಕ ಕ್ಯಾ. ಗಣೇಶ್ ಕಾರ್ಣಿಕ್ ಅಧ್ಯಕ್ಷತೆ ವಹಿಸಿದ್ದರು. ಕೆವಿಕೆ ಮುಖ್ಯಸ್ಥ ಡಾ. ಶಿವಕುಮಾರ್ ಮಗದ ಸ್ವಾಗತಿಸಿದರು. ಕೃಷಿ ಇಲಾಖೆ ಜಂಟಿ ಕೃಷಿ ನಿರ್ದೇಶಕ ಡಾ. ಕೆಂಪೇಗೌಡ ಎಚ್. ಉಪಸ್ಥಿತರಿದ್ದರು.

### ಯೋಜನೆ ರೂಪಿಸಲು ಸಮೀಕ್ಷೆ ಸಹಕಾರಿ

ಸಮಗ್ರ ಪ್ರಾಯೋಗಿಕ ಕಾರ್ಯಯೋಜನೆಗಾಗಿ ಕಾರ್ಯ ವ್ಯಾಪ್ತಿಯ ಕೃಷಿ ವಿಜ್ಞಾನ ಕೇಂದ್ರ (ಕೆವಿಕೆ)ಗಳು ಅಧ್ಯಯನ ಜವಾಬ್ದಾರಿ ವಹಿಸಿಕೊಳ್ಳಲಿದ್ದು, ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮೇಲ್ವಿಚಾರಣೆ ನಡೆಸಲಿದ್ದಾರೆ. ಹೀಗೆ ಸಿದ್ಧಗೊಂಡ ತಳಮಟ್ಟದ ಸಮೀಕ್ಷೆಯ ವಿವರವನ್ನು ಬೆಂಗಳೂರಿನ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆಯ ಅಧ್ಯಯನ ಸಂಸ್ಥೆಯು ಸಂಬಂಧಿಸಿದ ಕೆವಿಕೆ ತಾಂತ್ರಿಕ ಸಹಾಯದಿಂದ ಕಲೆ ಹಾಕಲಿದೆ. ಅಧ್ಯಯನ ಪೂರ್ಣಗೊಂಡ ಬಳಿಕ ಇಡೀ ರಾಜ್ಯಕ್ಕೆ ಅನ್ವಯವಾಗುವ ಯೋಜನೆ ಯಾವ ರೀತಿ ರೂಪಿಸಬಹುದು ಎನ್ನುವ ಕುರಿತು ಸರ್ಕಾರಕ್ಕೆ ವರದಿ ಒದಗಿಸಲಾಗುವುದು ಎಂದು ಡಾ.ಪ್ರಕಾಶ್ ಕಮ್ಮರಡಿ ತಿಳಿಸಿದರು.

# Karnataka panel picks 8 villages for income-doubling pilot

Business Line 31/12/16

## State's Agriculture Price Commission to prepare an integrated farming system

OUR BUREAU

Mangaluru, December 30

The Karnataka Agriculture Price Commission (KAPC) has selected eight villages in the State for a pilot welfare programme to enhance farmers' income.

This follows the Central government's proposal to double farmers' income in the next five years.

Prakash Kammardi, Chairman, KAPC, said the selected villages in different districts grow different crops.

They also possess different climatic conditions and have different soil quality.

Krishi Vigyan Kendras (KVKs) situated in Tumakuru, Kolar, Chitradurga, Dakshina Kannada, Raichur, Kalaburagi, Belagavi and Haveri districts will implement the pilot projects. They will be supported by the administrations of the districts concerned.

Stating that the KAPC wants to implement the project in a comprehensive way, Kammardi said KVKs will prepare an integrated farming system based on a baseline socio-economic survey conducted by Bengaluru-based Institute for Social and Economic Change (ISEC).

**Krishi Vigyan Kendras will prepare an integrated farming system based on a baseline socio-economic survey conducted by Bengaluru-based Institute for Social and Economic Change**

### Integrated farming

The pilot project in Chitradurga will focus on a millet-based integrated farming approach. An integrated farming system based on crops such as areca nut, coconut and paddy, and fisheries-related activities will be the focus areas in Dakshina Kannada district.

Kalaburagi district will focus on pulses, and Tumakuru on ragi, coconut and millets.

Seed production and agricultural crops will be the major contributors for the integrated farming system in Haveri district.

Kolar district's integrated farming approach will be based on fruits and vegetable cultivation and animal husbandry.

Belagavi will focus on fruits and vegetable cultivation and maize production.

### Spreading awarness

Kammardi said the Central and State governments have more than 50 programmes targeting farmers. Many farmers are unaware of the existence of these welfare programmes.

The district administrations concerned will take steps to inform them about these programmes.

Importance will be given to conducting soil quality tests and farmers' health check-up in the selected villages.

Quoting a study by a medical college, he said that traces of pesticides have been found in the blood samples of some farmers.

The enhancement of income levels of farmers also depend on how healthy they are.

### Blueprint

Based on the results of the projects in the eight villages, a district-level blueprint can be considered for enhancing the income level of farmers, he said.

Shivakumar Magada, Head of KVK in Mangaluru, told *BusinessLine* that Daregudde village in Moodbidri of Dakshina Kannada district is one of the villages selected for the pilot project.